CoverageReport: TCS IT Wiz – Bangalore Edition

**Publication:**Samyuktha Karnataka
**Date:**29/07/2014
**Edition:** Bangalore
**Page No:** 4
**Headline:** TCS IT WIZ on 7th August

# ಆ.7ಕ್ಕೆ ಟಿಸಿಎಸ್ ಐಟಿ ವಿಜ್

ಬೆಂಗಳೂರು, ಜು. 28: ದೇಶದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಕಂಪೆನಿ 'ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್'(ಟಿಸಿಎಸ್) 'ಟಿಸಿಎಸ್ ಐಟಿ ವಿಜ್ 2014' ರಸಪ್ರಶ್ನೆ ಸ್ಪರ್ಧೆಯ ಬೆಂಗಳೂರು ಆವೃತ್ತಿ ಆಗಸ್ಟ್ 7 ರಂದು ನಗರದ ವೈಯಾಲಿಕಾವಲ್‌ನಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿದೆ.

8ನೇ ತರಗತಿಯಿಂದ ಆರಂಭಿಸಿ 12ನೇ ತರಗತಿವರೆಗಿನ (ಪ್ರೌಢಶಾಲೆ ಮತ್ತು ಪಿಯು ಕಾಲೇಜು) ವಿದ್ಯಾರ್ಥಿಗಳು ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಯಾವುದೇ ರೀತಿಯ ಪ್ರವೇಶ ಶುಲ್ಕ ಇರುವುದಿಲ್ಲ. ಪ್ರತಿಯೊಂದು ಶಾಲೆ, ಕಾಲೇಜಿನಿಂದಲೂ ಇಬ್ಬರು ವಿದ್ಯಾರ್ಥಿಗಳನ್ನು ಒಳಗೊಂಡಂತಹ ತಲಾ 10 ತಂಡಗಳನ್ನು ಸ್ಪರ್ಧೆಗೆ ಕಳುಹಿಸಿಕೊಡಲು ಅವಕಾಶವಿದೆ.

'ಟಿಸಿಎಸ್ ಐಟಿ ವಿಜ್ 2014' ರಸಪ್ರಶ್ನೆ ಸ್ಪರ್ಧೆಯು ಭಾರತದ 14 ಸ್ಥಳಗಳಲ್ಲಿ ನಡೆಯುತ್ತದೆ. ಅಹಮದಾಬಾದ್, ಬೆಂಗಳೂರು, ಭುವನೇಶ್ವರ, ಚೆನ್ನೈ, ಕೊಯಮತ್ತೂರು, ದೆಹಲಿ, ಹೈದರಬಾದ್, ಇಂದೋರ್, ಕೊಚ್ಚಿ, ಕೋಲ್ಕತ್ತ, ಲಖನೌ, ಮುಂಬೈ, ನಾಗಪುರ ಮತ್ತು ಪುಣೆಯಲ್ಲಿ ಈ ಸ್ಪರ್ಧೆ ನಡೆಯುತ್ತದೆ.

ಆಸಕ್ತ ವಿದ್ಯಾರ್ಥಿಗಳು ಈ ಪ್ರತಿಷ್ಠಿತ 'ಟಿಸಿಎಸ್ ಐಟಿ ವಿಜ್ 2014' ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ತಮ್ಮ ಪ್ರೌಢಶಾಲೆ, ಕಾಲೇಜು ಮೂಲಕವೇ ಪ್ರವೇಶ ಪತ್ರವನ್ನು ಆಗಸ್ಟ್ 4ರಂದು ಅಥವಾ ಅದಕ್ಕೂ ಮುನ್ನವೇ ರವಾನಿಸಬೇಕು. ಪ್ರವೇಶ ಪತ್ರ ಕಳುಹಿಸಿಕೊಡಬೇಕಾದ ವಿಳಾಸ: 'ಟಿಸಿಎಸ್ ಐಟಿ ವಿಜ್ ಕಾರಿಡಾರ್', ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಎಸ್‌ಜೆಎಂ ಟವರ್, ನಂ. 18, ಶೇಷಾದ್ರಿ ರಸ್ತೆ, ಗಾಂಧಿ ನಗರ, ಬೆಂಗಳೂರು– 560 009.

ಸ್ಪರ್ಧೆಯ ಕುರಿತು ಹೆಚ್ಚಿನ ಮಾಹಿತಿಗೆ ದೂ: 080 67246000 ಸಂಪರ್ಕಿಸಬಹುದು. www.tcsitwiz.com ವೆಬ್‌ಸೈಟ್‌ಗೆ ಲಾಗ್‌ಇನ್ ಆಗುವ ಮೂಲಕವೂ ಸ್ಪರ್ಧೆಗೆ ಹೆಸರು ನೋಂದಾಯಿಸಿಕೊಳ್ಳಬಹುದು.

CoverageReport: TCS IT Wiz – Bangalore Edition

**Publication:**Samyuktha Karnataka
**Date:** 09/08/2014
**Edition:** Bangalore
**Page No:** 4
**Headline:** Winners of TCS IT WIZ

# ಸೇಂಟ್ ಫಾಲ್ಸ್‌ಗೆ ಟಿಸಿಎಸ್ ಪ್ರಶಸ್ತಿ



**ಬೆಂಗಳೂರು ಆ.8:** ಯುವ ಜನತೆಯಲ್ಲಿನ ಬುದ್ಧಿಮತ್ತೆಯನ್ನು ಒರೆಗಲ್ಲಿಗೆ ಹಚ್ಚುವಂತಹ ತಂತ್ರಜ್ಞಾನ ಗೇಮಿಫಿಕೇಷನ್, ಎನಿಮೇಷನ್ ಮತ್ತು ನೂತನ ತಂತ್ರಜ್ಞಾನಗಳ ಬಗ್ಗೆ ವಿದ್ಯಾರ್ಥಿಗಳ ಬುದ್ಧಿಮಟ್ಟವನ್ನು ಪರಿಶೋಧಿಸುವ ಟಿಸಿಎಸ್ ಐಟಿ ವಿಜ್ ಕಾರ್ಯಕ್ರಮದಲ್ಲಿ ನಗರದ ಸೇಂಟ್ ಫಾಲ್ಸ್ ಸ್ಕೂಲ್ ಪ್ರಥಮ ಸ್ಥಾನ ಪಡೆದುಕೊಂಡಿತು.

ನಗರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿತ್ತು. ಈ ಕಾರ್ಯಕ್ರಮದಲ್ಲಿ 6 ಶಾಲೆಗಳಿಂದ 12 ವಿದ್ಯಾರ್ಥಿಗಳು ಭಾಗವಹಿಸಿದ್ದರು. 5 ಸುತ್ತುಗಳ ಈ ಸ್ಪರ್ಧೆಯಲ್ಲಿ ಪ್ರತಿ ಸುತ್ತಿನಲ್ಲೂ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತಹ ಫ್ಲಿಪ್ ಬೋರ್ಡಿಂಗ್, ಡ್ರೋನಿಂಗ್, ಡಿಸ್ರಪ್ಟೀವ್ ಥಿಂಕಿಂಗ್, ಸೊಲೊ ಮೊ (ಸೋಷಿಯಲ್-ಲೋಕಲ್-ಮೊಬೈಲ್), @ ಟಿಸಿಎಸ್-ನ ವಿಶ್ವದೊಳಗೊಂದು ಸುತ್ತು ಎನ್ನುವ 5 ಸುತ್ತುಗಳಲ್ಲಿ ಪ್ರಶ್ನೆಗಳನ್ನು ಕೇಳುವುದರ ಮೂಲಕ ವಿದ್ಯಾರ್ಥಿಗಳ ಬುದ್ಧಿಮಟ್ಟವನ್ನು ತಿಳಿಯುವುದರ ಜೊತೆಗೆ ತಮ್ಮ ಮುಂದಿನ ವಿದ್ಯಾಭ್ಯಾಸದ ಕಡೆಗೆ ಆಲೋಚಿಸಲು ಉತ್ತಮ ವೇದಿಕೆಯಾಗಿತ್ತು.

55 ಅಂಕ ಪಡೆಯುವ ಮೂಲಕ ಸೇಂಟ್ ಫಾಲ್ಸ್ ಸ್ಕೂಲ್ ಪ್ರಥಮ ಸ್ಥಾನ ಪಡೆದುಕೊಂಡರೆ, ಕುಮಾರನ್ ಸಿಬಿಎಸ್ಇ ಸ್ಕೂಲ್ 41 ಅಂಕ ಪಡೆದು ಎರಡನೆ ಸ್ಥಾನ ಪಡೆದುಕೊಂಡಿತು. ಇವೆರಡರ ವಿರುದ್ಧ ಪ್ರಭಾವಶಾಲಿಯಾಗಿ ಹೋರಾಡಿದ ನ್ಯಾಷನಲ್ ಪಬ್ಲಿಕ್ ಸ್ಕೂಲ್ 39 ಅಂಕ ಪಡೆದು ಮೂರನೆ ಸ್ಥಾನ ಪಡೆದುಕೊಂಡಿತು.

ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಟಿಸಿಎಸ್ ಕಡೆಯಿಂದ ಐಪಾಡ್ ಏರ್ ಉಪಕರಣವನ್ನು ಬಹುಮಾನವಾಗಿ ವಿತರಿಸಿದರೆ, ಎರಡನೆ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಮಿನಿ ಐಪಾಡ್ ಸಾಧನಗಳ ಜೊತೆಗೆ ಟಿಸಿಎಸ್ ಐಟಿ ವಿಜ್ ಫಲಕ ಮತ್ತು ಪದಕ, ಸ್ಪೇಸ್ ಪ್ಯಾಕ್, ಸಿಪ್ಪರ್ಸ್, ಈಯರ್ ಫೋನ್, ಯುಎಸ್‌ಬಿ ಪೆನ್ ಡ್ರೈವ್, ಸ್ಪೀಕರ್ಸ್ ಮತ್ತಿತರ ಬಹುಮಾನಗಳನ್ನು ವಿತರಿಸಲಾಯಿತು.